# ...ಟ್ರಾವೆಲ್ಸ್

ಹೊಸ ಬಸ್ಸು ಖರೀದಿಸಿದ ಗುಂಡ, ಒಂದು ಶುಭದಿನದಂದು ಪೂಜೆ ಮಾಡಿ ಸಿಹಿ ಹಂಚಿದ. ಸಿಹಿ ತಿಂದ ಜನ ಬಸ್ಸು ನೋಡಿ ಒಂದೇ ಸಮನೆ ನಗಲು ಶುರುಮಾಡಿದರು. ಯಾಕೆ ಎಂಬುದು ಗುಂಡನಿಗೆ ಅರ್ಥವೇ ಆಗಲಿಲ್ಲ. ಆಗ ಗುಂಡನ ಗೆಳೆಯ ಹೇಳಿದ: 'ಯಮುನಾ ಟ್ರಾವೆಲ್ಸ್' ಅಂತ ಬರೆಸುವ ಬದಲು 'ಯಮನ ಟ್ರಾವೆಲ್ಸ್' ಅಂತ ಬರೆಸಿದ್ದಿಯಲ್ಲೊ ಎಂದ!...

**ನರಸಿಂಹ ಪೈ**



# ಪ್ರೊಸೀಜರ್

ಬ್ಯಾಂಕಿನಲ್ಲಿ ಚೆಕ್ ಜಮಾ ಮಾಡಲು ಹೋದ ಗ್ರಾಹಕ, 'ಇಂದು ಚೆಕ್ ಕೊಟ್ಟರೆ ಯಾವಾಗ ಕ್ಲಿಯರ್ ಆಗುತ್ತದೆ?' ಎಂದು ಕೇಳಿದ. 'ಮೂರು ದಿನಗಳಾದರೂ ಬೇಕು' ಎಂದ ಗುಮಾಸ್ತ.

'ಅಯ್ಯೋ, ನನಗೆ ಅರ್ಜೆಂಟ್ ಹಣ ಬೇಕಿತ್ತು. ಎರಡೂ ಬ್ಯಾಂಕ್‌ಗಳು ಎದುರು–ಬದುರು ಇದ್ದರೂ ಮೂರು ದಿನ ಯಾಕೆ ಬೇಕು?' ಎಂದು ಕೇಳಿದ ಗ್ರಾಹಕ.

'ಬ್ಯಾಂಕ್ ಎಷ್ಟೇ ಹತ್ತಿರ ಇದ್ದರೂ ಅಗತ್ಯ ಪ್ರೊಸೀಜರ್ ಮಾಡಲೇಬೇಕಲ್ಲ ಸರ್. ಸ್ವಲ್ಪ ವಿಚಾರ ಮಾಡ್ರಿ, ಸ್ಮಶಾನದ ಹತ್ತಿರ ಹಾಯ್ದು ಹೋಗುವಾಗ ದಾರಿಯಲ್ಲಿ ಹೃದಯಾಘಾತವಾಗಿ ನೀವು ಸಾವನ್ನಪ್ಪುತ್ತೀರಿ. ಆಗ ನಿಮ್ಮನ್ನು ಅಲ್ಲೇ ಮಣ್ಣು ಮಾಡುತ್ತಾರೊ ಅಥವಾ ಮನೆಗೆ ಒಯ್ದು ಅಗತ್ಯ ಕ್ರಿಯೆಗಳನ್ನು ಮುಗಿಸಿ ನಂತರ ಸ್ಮಶಾನಕ್ಕೆ ತರುತ್ತಾರೊ...'

'ಹೋಗಲಿ ಬಿಡ್ರಿ, ಎಷ್ಟು ದಿನವಾದರೂ ಆಗಲಿ, ನಡೀತದೆ' ಎಂದ ಗ್ರಾಹಕ ಅಲ್ಲಿಂದ ಮಾಯವಾಗಿದ್ದ!

**ಎ.ಎ. ಸನದಿ**



ಚಿತ್ರಗಳು: ಗಣೇಶ ಆಚಾರ್ಯ